Civil mis.8/19

**ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**
**ದಿನಾಂಕಃ 27.03.2023.**

**ಪಾಟೀ ಸವಾಲುಃ ಶ್ರೀ ಸಿ ಡಿ ಎನ್ ವಕೀಲರಿಂದಃ**

ನಾನು 5 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. 1989 ನೇ ಇಸವಿಯ ದಾವೆಗೆ ಮಾಹಿತಿಯನ್ನು ವಕೀಲರಿಗೆ ನಾನೇ ನೀಡಿರುತ್ತೇನೆ. 1 ನೇ ಪ್ರತಿವಾದಿ ನನ್ನ ತಂದೆಯ 2 ನೇ ಹೆಂಡತಿಯ ಮಗ ಎಂದರೆ ಸರಿ. ಸರ್ವೇ ನಂ.130/2 ರ ಕ್ಷೇತ್ರ 9.08 ಗುಂಟೆಯಲ್ಲಿ ನನಗೆ ಅರ್ಧ ಮತ್ತು 1 ನೇ ಪ್ರತಿವಾದಿಗೆ ಅರ್ಧ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. 1989 ರ ಇಸವಿಯ ದಾವೆಯಲ್ಲಿ ನನಗೆ ಅರ್ಧ ಹಕ್ಕು ಎಂದು ಮತ್ತು 1 ನೇ ಪ್ರತಿವಾದಿಗೆ ಅರ್ಧ ಹಕ್ಕು ಎಂದು ಆದೇಶವಾಗಿರುತ್ತದೆ ಎಂದರೆ ಸರಿಯಲ್ಲ ಮತ್ತು ನಾನು ಸದರಿ ಆದೇಶದ ಮೇಲೆ ಮೇಲ್ಮನವಿ ಸಲ್ಲಿಸಿರುವುದಿಲ್ಲಾ. ಅಸಲು ದಾವೆ ಸಂಖ್ಯೆ 96/1989 ರಲ್ಲಿ ಆದ ಆದೇಶದ ಮೇರೆಗೆ ನಾನು 2019 ನೇ ಇಸವಿಯಲ್ಲಿ ಎಫ್ ಡಿ ಪಿ ನಂ.22/2019 ನ್ನು ದಾಖಲಿಸಿರುತ್ತೇನೆಂದರೆ ಸರಿ. 1989 ನೇ ಸಾಲಿನಲ್ಲಿ ದಾವಾ ಆಸ್ತಿಯ ಪೂರ್ವಕ್ಕೆ 1 ನೇ ಪ್ರತಿವಾದಿಯ ಮನೆ ಮತ್ತು ಕೊಟ್ಟಿಗೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಪಶ್ಚಿಮಕ್ಕೆ ನಮ್ಮ ಪೂರ್ವಜರ ಮನೆ ಇತ್ತು ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮದಿಂದ ಪೂರ್ವಕ್ಕೆ ಎಷ್ಟು ಅಳತೆಯ ಉದ್ದ ಇದೆ ಎಂದರೆ ನನಗೆ ಗೊತ್ತಿಲ್ಲಾ. ನಮ್ಮ ಮನೆಯ ಪಶ್ಚಿಮ , ದಕ್ಷಿಣ ಮತ್ತು ಪೂರ್ವ ದಿಕ್ಕಿನ ಬಾವಿಯ ತನಕ ಬೇಲಿ ಹಾಕಿರುತ್ತೇವೆ ಎಂದರೆ ಸರಿ. ಬಾವಿಯ ಪೂರ್ವ ದಿಕ್ಕಿಗೆ ಇರುವ ಮನೆಯಲ್ಲಿ 1 ನೇ ಪ್ರತಿವಾದಿಯ ಸಹೋದರರು ಇದ್ದರು ಎಂದರೆ ಸರಿ. 1989 ನೇ ಇಸವಿಯ ದಾವೆಯಲ್ಲಿ ದ ಆದೇಶದ ಪ್ರಕಾರ ನಾವುಗಳು ಜಾಗದ ಕಬ್ಜೆಯಲ್ಲಿ ಇದ್ದು , 2019 ನೇ ಇಸವಿಯಲ್ಲಿ ನಾನು ಎಫ್ ಡಿ ಪಿ 22/2019 ದಾಖಲಿಸಿರುವುದಿಲ್ಲಾ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಅರ್ಜಿಯಲ್ಲಿ ಏನು ಬರೆದಿದೆ ಎಂದು ನನಗೆ ತಿಳಿದಿರುತ್ತದೆ ಮತ್ತು ಅದನ್ನು ಸಲ್ಲಿಸಲು ನನ್ನ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. 1 ನೇ ಪ್ರತಿವಾದಿ ಪಂಚಾಯತಿಯಿಂದ ಅನುಮತಿ ಪಡೆಯದೇ ಮನೆಯನ್ನು ಕಟ್ಟುತ್ತಿದ್ದಾರೆ

ಎಂಬುದರ ಬಗ್ಗೆ ನಾನು ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲಾ ಎಂದರೆ ಸರಿಯಲ್ಲ. ನಿಪಿ.6 ನ್ನು ಪಂಚಾಯತಿಗೆ ಬರೆದಿದ್ದು , ಅದಕ್ಕೆ ಪಂಚಾಯತಿಯವರು ಪ್ರತ್ಯುತ್ತರ ನೀಡಿರುವುದಿಲ್ಲಾ ಎಂದರೆ ಸರಿ. ದಿನಾಂಕಃ 04.12.2019 ರಂದು ನಾನು ಸಲ್ಲಿಸಿದ ಅರ್ಜಿಯಲ್ಲಿ 1 ನೇ ಪ್ರತಿವಾದಿ ಕಟ್ಟುತ್ತಿದ್ದ ಮನೆಯ ಗೋಡೆ ಮತ್ತು ಸ್ಲಾಬ್ ಪೂರ್ಣಗೊಂಡಿರುತ್ತದೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. 1 ನೇ ಪ್ರತಿವಾದಿ ತಡೆಯಾಜ್ಞೆ ಇದ್ದರೂ ಸಹ ಮನೆ ನಿರ್ಮಾಣ ಮಾಡಿದ್ದರ ಬಗ್ಗೆ ಫೋಟೋಗಳನ್ನು ಹಾಜರು ಪಡಿಸಿರುತ್ತೇನೆ. ಛಾಯಾಚಿತ್ರಗಳನ್ನು ಹಾಜರು ಪಡಿಸಿದರೆ ಪ್ರತಿವಾದಿ ಯಾವ ಹಂತದ ತನಕ ಮನೆಯ ನಿರ್ಮಾಣ ಮಾಡಿರುತ್ತಾನೆಂದು ತಿಳಿಯುತ್ತದೆ , ಸದರಿ ಕಾರಣದ ಸಲುವಾಗಿ ನಾನು ಛಾಯಾಚಿತ್ರಗಳನ್ನು ಹಾಜರು ಪಡಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನು ಛಾಯಾಚಿತ್ರಗಳನ್ನು ಹಾಜರು ಪಡಿಸಿರುವುದಿಲ್ಲಾ ಎಂದರೆ ಸರಿಯಲ್ಲ. ಛಾಯಾಚಿತ್ರಗಳಲ್ಲಿ ದಿನಾಂಕ ಮತ್ತು ಸಮಯ ಇರುವುದಿಲ್ಲಾ ಎಂದರೆ ಸರಿ. ನಾನು ಈ ಅರ್ಜಿಯನ್ನು ಸಲ್ಲಿಸುವ ಸಮಯದಲ್ಲಿ ಒಂದನೇ ಪ್ರತಿವಾದಿ ಮನೆಯನ್ನು ಪೂರ್ತಿಯಾಗಿ ನಿರ್ಮಾಣ ಮಾಡಿದ್ದು , ಆದ ಕಾರಣ ಸದರಿ ಛಾಯಾಚಿತ್ರಗಳಲ್ಲಿ ದಿನಾಂಕ ಮತ್ತು ಸಮಯ ಇರುವುದಿಲ್ಲಾ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ತಮಗೆ ಸೇರಿದ ಪಾಲಿನಲ್ಲಿ ಮನೆಯನ್ನು ಕಟ್ಟಿದ್ದರೂ ನಾನು ಅವರ ವಿರುದ್ಧ ಅರ್ಜಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾವು ಈಗಿರುವ ಮನೆ ರಸ್ತೆಗೆ ತಾಗಿಕೊಂಡಂತೆ ಇದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಸದರಿ ಮನೆಯನ್ನು ನಾವು ಮುಂಚೆಯೇ ಕಟ್ಟಿರುತ್ತೇವೆ. ನಾನು 50 ಮೀಟರ ರಸ್ತೆಯ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ರಸ್ತೆಗೆ ತಾಗಿ ಮನೆ ಕಟ್ಟಿದ್ದು , ಅವರ ವಿರುದ್ಧ ನಾನು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯನ್ನು ಬಿಟ್ಟರೆ 1 ನೇಪ್ರತಿವಾದಿ ನ್ಯಾಯಾಲಯದ ಆದೇಶವನ್ನು ಉಲ್ಲಂಘನೆ ಮಾಡಿರುತ್ತಾರೆ ಎಂದು ತೋರಿಸಲು ಯಾವುದೇ ದಾಖಲೆಗಳು ಇರುವುದಿಲಾಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯಾವತ್ತೂ ನ್ಯಾಯಾಲಯದ ಆದೇಶ ಉಲ್ಲಂಘಿಸಿರುವುದಿಲ್ಲಾ ಎಂದರೆ ಸರಿಯಲ್ಲ. ನಾನು ಅರ್ಜಿಯನ್ನು ದಾಖಲಿಸುವ ಮೊದಲೇ 1 ನೇ ಪ್ರತಿವಾದಿ ಸಂಪೂರ್ಣವಾಗಿ ಮನೆಯನ್ನು ನಿರ್ಮಾಣ ಮಾಡಿದ್ದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನ್ಯಾಯಾಲಯ ತಡೆಯಾಜ್ಞೆ ಆದೇಶ ಹೊರಡಿಸಿದ ನಂತರ ಯಾವುದೇ ನಿರ್ಮಾಣದ ಕೆಲಸ ಮಾಡಿರುವುದಿಲ್ಲಾ ಎಂದರೆ ಸರಿಯಲ್ಲ.

**ಮರು ವಿಚಾರಣೆಃ – ಇಲ್ಲಾ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)

ಓ. ಹೇ.ಕೇ. ಸರಿ ಇದೆ.

**ಪ್ರ.ದ.ನ್ಯಾದಂ. ಕಾರವಾರ**